## ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹೊನ್ನಾಳಿ

ಸಿ.ಸಿ.93/2024

ಸಾಕ್ಷಿದಾರರ ಹೇಳಿಕೆಃ

| | | | | |
|---|---|---|---|---|
| ಹೆಸರು | : | ನಾಗರಾಜ | CW: 7 | PW: 2 |
| ತಂದೆಯ ಹೆಸರು | : | ಈರಪ್ಪ | | |
| ವಯಸ್ಸು | : | 46 | | |
| ವೃತ್ತಿ | : | ವ್ಯವಸಾಯ | | |
| ವಾಸಸ್ಥಳ | : | ಜಯನಗರ | | |

ದಿನಾಂಕಃ 21.08.2025 ರಂದು ಸಾಕ್ಷಿಯನ್ನು ಕರೆದು ಪ್ರಮಾಣವಚನ ಭೋಧಿಸಲಾಯಿತು.

ಮುಖ್ಯವಿಚಾರಣೆಃ – ಮಾನ್ಯ ಸ.ಸ.ಅ.ರವರಿಂದಃ–

ಆರೋಪಿ ಮತ್ತು ಮೃತ ಹಾಲೇಶಪ್ಪ ಗೊತ್ತಿಲ್ಲ. ಚಾಸಾ 8 ಮತ್ತು 9 ರವರು ಗೊತ್ತು. ಚಾಸಾ 1, 11 ಮತ್ತು 12 ರವರು ಗೊತ್ತಿಲ್ಲ. ನನಗೆ ಈ ಪ್ರಕರಣದ ಬಗ್ಗೆ ಗೊತ್ತಿಲಲ. ನಾನು ಯಾವುದೇ ಅಪಘಾತವನ್ನು ನೊಡಿಲ್ಲ. ನನ್ನ ಸಮಕ್ಷಮ ಪೋಲೀಸರು ಯಾವುದೇ ಪಂಚನಾಮೆ ಜರುಗಿಸಿಲ್ಲ. ನಾನು ಈ ಸಂಬಂಧ ಪೊಲೀಸರಿಗೆ ಯಾವುದೇ ಹೇಳಿಕೆಯನ್ನು ನೀಡಿಲ್ಲ. ಪೊಲೀಸರ ಕೋರಿಕೆಯ ಮೇರೆಗೆ ಕೆಲವು ದಾಖಲೆಗಳಿಗೆ ನಾನು ಸಹಿಯನ್ನು ಮಾಡಿರುತ್ತೇನೆ. ಆದರೆ ಅದರಲ್ಲಿ ಏನು ಬರೆದಿದೆ ಎನ್ನುವ ವಿಚಾರ ನನಗೆ ಗೊತ್ತಿಲ್ಲ.

ಸಾಕ್ಷಿಯು ಸ್ಥಳ ಪಂಚನಾಮೆ, ಕಚ್ಚಾ ನಕಾಶೆ, ವಾಹನ ಅಮಾನತ್ತುಪಂಚನಾಮೆಯಲ್ಲಿ ತನ್ನ ಸಹಿಗಳನ್ನು ನೋಡಿ ಗುರುತಿಸಿದ್ದು ಸ್ಥಳ ಪಂಚನಾಮೆಯನ್ನು ನಿಪಿ 2 ಎಂದು, ಸಾಕ್ಷಿಯ ಸಹಿಯನ್ನು ನಿಪಿ 2(ಎ) ಎಂದು , ಕಚ್ಚಾ ನಕಾಶೆಯನ್ನು ನಿಪಿ 3 ಎಂದು, ಸಾಕ್ಷಿಯ ಸಹಿಯನ್ನು ನಿಪಿ 3(ಎ) ಎಂದು ಗುರುತಿಸಲಾಯಿತು. ಸ್ಥಳ ಪಂಚನಾಮೆ ಸಂದರ್ಭ ತೆಗೆದ ವಾಹನ ಅಮಾನತ್ತು

ಪಂಚನಾಮೆಯನ್ನು ನಿಪಿ 6 ಎಂದು, ಸಾಕ್ಷಿಯ ಸಹಿಯನ್ನು ನಿಪಿ 6(ಎ) ಎಂದು ಗುರುತಿಸಲಾಯಿತು. ವಾಹನ ಅಮಾನತ್ತು ಪಂಚನಾಮೆ ಸಂದರ್ಭ ತೆಗೆದ 2 ಫೋಟೋಗಳಲ್ಲಿ ಸಾಕ್ಷಿ ತನ್ನನ್ನು ತಾನು ನೋಡಿ ಗುರುತಿಸಿದ್ದು ಯಾವ ಕಾರಣಕ್ಕೆ ತೆಗೆದಿರುತ್ತಾರೆ ಎಂದು ಗೊತ್ತಿಲ್ಲ. ಫೋಟೋಗಳನ್ನು ನಿಪಿ 7 ಮತ್ತು 8 ಎಂದು ಗುರುತಿಸಲಾಯಿತು.

(ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಸ.ಸ.ಅ ರವರು ಅನುಮತಿ ಕೋರಿದ್ದಾರೆ. ಸೂಕ್ತ ಕಾರಣ ನೀಡಿದ ಮೇರೆಗೆ ಅನುಮತಿ ನೀಡಲಾಗಿದೆ.)

ಪಾಟೀ ಸವಾಲುಃ ಮಾನ್ಯ ಸ.ಸ.ಅ.ರವರಿಂದಃ-

ದಿಃ 07.09.2023 ರಂದು ನಾನು ಹಾಗೂ ಚಾಸಾ 8 ಮತ್ತು 9 ರವರು ಚಿನ್ನಿಕಟ್ಟೆ ಗ್ರಾಮದಲ್ಲಿ ತಾವರೇ ಕೆರೆಯ ಕಾಮಗಾರಿ ನಡೆಯುುತ್ತಿರುವುದನ್ನು ಮಧ್ಯಾಹ್ನ 3 ಗಂಟೆಯಲ್ಲಿ ನೋಡುತ್ತಿರುವಾಗ ಆ ಸಮಯದಲ್ಲಿ ಶಿಕಾರಿಪುರದ ಕಡೆಯಿಂದ ಸವಳಂಗ ಗ್ರಾಮದ ಕಡೆಗೆ ಒಬ್ಬಬೈಕ್ ಸವಾರ ಬೈಕನ್ನು ಚಾಲನೆ ಮಾಡಿಕೊಂಡು ಬರುತ್ತಿರುವಾಗ ಅದೇ ಸಮಯಕ್ಕೆ ಸವಳಂಗ ಗ್ರಾಮದ ಕಡೆಯಿಂದ ಒಬ್ಬ ಸ್ಯಾಂಟ್ರೋ ಕಾರಿನ ಚಾಲಕ ತನ್ನ ಕಾರನ್ನು ಅತೀವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ಶಿಕಾರಿಪುರದ ಕಡೆಗೆ ಬರುತ್ತಿದ್ದ ಬೈಕ್ ಗೆ ಅಪಘಾತಪಡಿಸಿರುತ್ತಾನೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ನಾನು , ಚಾಸಾ 8 ಮತ್ತು 9 ರವರ ಬೈಕ್ ಸವಾರನಾದ ಹಾಲೇಶರವರನ್ನು ಉಪಚರಿಸಿರುತ್ತೇವೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ಚಾಸಾ 8 ರವರು ಅಪಘಾತವಾದ ಹಾಲೇಶರವರು ನನ್ನ ಪರಿಚಯಸ್ಥರು ಎಂದು ಹಾಲೇಶ ರವರ ಮನೆಗೆ ಅಪಘಾತದ ವಿಚಾರವನ್ನು ಫೋನ್ ಮಾಡಿ ತಿಳಿಸಿರುತ್ತಾರೆ ಎಂದರೆ ಸರಿಯಲ್ಲ, ನಂತರ ಆ್ಯಂಬುಲೆನ್ಸ್‌ನಲ್ಲಿ ಹಾಲೇಶರವರನ್ನು ಶಿವಮೊಗ್ಗ ಮೆಗ್ಗಾನ್ ಆಸ್ಪತ್ರೆಗೆ ಕಳುಹಿಸಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಅಪಘಾತಕ್ಕೀಡಾಗದ ಬೈಕ್ ನಂಬರ್ ಕೆಎ 14/ಇಡಬ್ಲ್ಯೂ 2712 ಮತ್ತು ಅಪಘಾತಪಡಿಸಿದ ಕಾರಿನ ನಂಬರ್ ಕೆಎ 14 /ಎನ್ 2712 ಸ್ಯಾಂಟ್ರೋ ಕಾರ್ ಎಂದರೆ ಸರಿಯಲ್ಲ. ಅಪಘಾತಕ್ಕೀಡಾದ ಹಾಲೇಶಪ್ಪ ರವರನ್ನು ಹೆಚ್ಚಿನ ಚಿಕಿತ್ಸೆಗಾಗಿ ಶಿವಮೊಗ್ಗದ ಸರ್ಜಿ ಆಸ್ಪತ್ರೆಗೆ ದಾಖಲಾಗಿ ಚಿಕಿತ್ಸೆ ಫಲಕಾರಿಯಾಗದೇ ಅದೇ ದಿನ ರಾತ್ರಿ 7.43 ಗಂಟೆಯಲ್ಲಿ ಮೃತಪಟ್ಟಿರುತ್ತಾರೆ ಎಂದರೆ ಸರಿಯಲ್ಲ.

ಈ ಸಂಬಂಧ ಪೋಲೀಸರಿಗೆ ದಿಃ 08.09.2023 ರಂದು ಪೋಲೀಸರು ನಾನು ಸ್ಥಳ ತೋರಿಸಿದ ಮೇರೆಗೆ ನನ್ನ, ಚಾಸಾ 11 ರವರ ಸಮಕ್ಷಮ ಸಂಜೆ 4.30 ರಿಂದ 5.15 ಗಂಟೆ

ಸಮಯದಲ್ಲಿ ನಿಪಿ 2 ರಂತೆ ಸ್ಥಳ ಪಂಚನಾಮೆ ಜರುಗಿಸಿ, ನಿಪಿ 3 ರಂತೆ ಕಚ್ಚಾ ನಕಾಶೆ ತಯಾರಿಸಿ , ನಿಪಿ 4 ಮತ್ತು 5 ರಂತೆ ಪೋಟೋಗಳನ್ನು ತೆಗೆದಿರುತ್ತಾರೆ ಎಂದರೆ ಸರಿಯಲ್ಲ. ಅದೇ ದಿನ ನನ್ನ, ಚಾಸಾ 11 ಮತ್ತು 12 ರವರ ಸಮಕ್ಷಮ ಸವಳಂಗ ಉಪಪೋಲೀಸ್ ಠಾಣಾ ಆವರಣದಲ್ಲಿ ಸಂಜೆ 5.45 ರಿಂದ 6.30 ರ ಗಂಟೆ ಸಮಯದಲ್ಲಿ ನಿಪಿ 6 ರಂತೆ ವಾಹನ ಪಂಚನಾಮೆ ಜರುಗಿಸಿ ಕೆಎ 14 ಇಡಬ್ಲ್ಯೂ 4162 ನಂಬರ್ ನ ಬೈಕನ್ನು ಮತ್ತು ಕೆಎ 14 ಎನ್ 2712 ನಂಬರ್ ನ ಸ್ಯಾಂಟ್ರೊ ಕಾರನ್ನು ವಶಪಡಿಸಿಕೊಂಡು ನಿಪಿ 7 ಮತ್ತು 8 ರಂತೆ ಪೋಟೋಗಳನ್ನು ತೆಗೆದಿರುತ್ತಾರೆ ಎಂದರೆ ಸರಿಯಲ್ಲ. ಈ ಸಂಬಂಧ ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯ ಒಪ್ಪದ ಹೇಳಿಕೆಯನ್ನು ನಿಪಿ 9 ಎಂದು ಗುರುತಿಸಲಾಯಿತು.

ಎಲ್ಲಾ ವಿಚಾರಗಳು ಗೊತ್ತಿದ್ದರೂ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಪಾಟೀ ಸವಾಲುಃ- ಆರೋಪಿ ಪರ ವಕೀಲರಿಂದಃ-

ಆರೋಪಿ ಪರ ವಕೀಲರು ಪಾಟೀ ಸವಾಲು ಏನು ಇಲ್ಲ ಎಂದು ತಿಳಿಸಿದ ಮೇರೆಗೆ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರುವಿಚಾರಣೆ ಇಲ್ಲ.

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.